# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 1) ಶ್ರೀ ಎ.ಎನ್.ಲಕ್ವಾಣಿ, ಕಾರ್ಯದರ್ಶಿ(ನಿವೃತ್ತ), ಉದಮಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು 2) ಶ್ರೀ ವಿ.ಡಿ.ಮನವಾಚಾರಿ, ಹಿಂದಿನ ಕಾರ್ಯದರ್ಶಿ, ಉದಮಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ:**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂ. Compt/UPLOK/BGM-2520/2013/PP, ದಿನಾಂಕ:16.03.2017
2) ಮಾನ್ಯ ಉಪಲೋಕಾಯುಕ್ತ-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ವರದಿ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ-2520/2013/ಪಿಪಿ, ದಿ.03.03.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 03.03.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಮೊಹಮ್ಮದ್ ಹನೀಫ್ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿ, ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಉದುಪಡಿ ಗ್ರಾಮದ ಸರ್ವೆ ನಂ.206/2ಪಿ ಜಮೀನು 11 ಎಕರೆ 25 ಗುಂಟೆ ಇದ್ದು, ಅದರಲ್ಲಿ 2 ರಿಂದ 2.5 ಎಕರೆ ಜಮೀನನ್ನು ಇಂದಿರಾ ಆವಾಜ್ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಅಕ್ರಮವಾಗಿ ನಿರ್ಮಿಸಲಾಗಿರುತ್ತದೆ. ಇನ್ನುಳಿದಂತೆ ಖಾಲಿ ಜಾಗ ಇರುತ್ತದೆ. ಸದರಿ ಉಳಿದ ಖಾಲಿ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ಗ್ರಾಮ ಪಂಚಾಯತಿ ಮತ್ತು ರಾಜಕೀಯದವರು ಶಾಮೀಲಾಗಿ ಸರ್ವೆ ನಂ.206/2ಪಿ ಎಂದು ಇದ್ದ ದಾಖಲೆಗಳನ್ನು ಗ್ರಾಮ ಪಂಚಾಯತಿ ವಿಪಿಸಿ ನಂಬರ್ ನೀಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಜಮೀನನ್ನು ಅಕ್ರಮವಾಗಿ ದುರುಪಯೋಗಪಡಿಸಿಕೊಳ್ಳಲು ಕ್ರಮ ಜರುಗಿಸಿರುತ್ತಾರೆ. ಆದ್ದರಿಂದ, ಸದರಿ ಸರ್ವೆ ನಂಬರ್ 206/2ಪಿ ಯ ಜಮೀನು ಖಾಸಗಿಯವರ ಪಾಲಾಗಿರುತ್ತದೆ. ಆದ್ದರಿಂದ ಈ ಅಕ್ರಮವನ್ನು ತಡೆಯಬೇಕೆಂದು ಕೋರಿರುತ್ತಾರೆ. ಈ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆ ನಡೆಸಲಾಗಿರುತ್ತದೆ.

ಮೇಲ್ಕಂಡ ಅಂಶಗಳು, ಎದುರುದಾರರ ಆಕ್ಷೇಪಣೆಗಳು, ಕಡತ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಗ್ರಾಮ ಪಂಚಾಯತಿಯ ಹಕ್ಕುಗಳ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಕ್ರಮ ಸಂಖ್ಯೆ: 298 ರಲ್ಲಿ ಹಕ್ಕಿನ ಪ್ರಕಾರ ಎಂದು ಇರುವ ಕಾಲಂ ನಲ್ಲಿ ಸರ್ವೆ ನಂ.206/2ಪಿ ಯ 11 ಎಕರೆ 25 ಗುಂಟೆ ಜಮೀನನ್ನು ಸರ್ಕಾರ ಎಂದು ದಾಖಲು ಮಾಡಿರುವುದು ಕಂಡುಬರುತ್ತದೆ. ಸದರಿ ದಾಖಲೆಯನ್ನು ಹಾಗೂ ಆರ್.ಟಿ.ಸಿ. ಯನ್ನು ಹಾಜರುಪಡಿಸಿದ್ದು, ಸದರಿ ಆರ್.ಟಿ.ಸಿ. ಪ್ರತಿಯಲ್ಲಿ 11 ಎಕರೆ 25 ಗುಂಟೆ ಜಮೀನನ್ನು ಕಾಶಲಂ ನಂ.9 ರಲ್ಲಿ ಸರ್ಕಾರ ಎಂದು ತೋರಿಸಿರುವುದು ಕಂಡು ಬರುತ್ತದೆ. ಇದರಿಂದ ಸರಿ ಜಮೀನು ಸರ್ಕಾರಕ್ಕೆ ಸೇರಿದ್ದೆಂದು ಸ್ಪಷ್ಟಪಡುತ್ತದೆ. ಹೀಗಿರುವಲ್ಲಿ ಸದರಿ ಜಮೀನನ್ನು ಬೇರೆಯವರ ಹೆಸರಿಗೆ ವರ್ಗಾಯಿಸಲು ಗ್ರಾಮ ಪಂಚಾಯತಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಇದಕ್ಕೆ ಸರ್ಕಾರದ ಅನುಮತಿ ಬೇಕಾಗಿರುತ್ತದೆ. ಸದರಿ ಜಮೀನು ಗ್ರಾಮ, ಪಂಚಾಯತಿಗೆ ಸೇರಿದ್ದಾಗಿರುವುದಿಲ್ಲ. ಆದ್ದರಿಂದ, ಸದರಿ ಜಮೀನನ್ನು ಅರ್ಜಿದಾರರುಗಳಿಗೆ ಅವರವರ ಹೆಸರಿಗೆ ವಿಪಿಸಿ ನಂಬರ್ ನೀಡಿ ಗ್ರಾಮ ಪಂಚಾಯತಿ ದಾಖಲೆಯಲ್ಲಿ ದಾಖಲಿಸಿರುವುದು ಕಾನೂನುಬಾಹಿರವಾಗಿರುತ್ತದೆ. ಈ ವಿಷಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಸದರಿ ಕರ್ತವ್ಯಲೋಪಕ್ಕೆ ಕಾರಣೀಕರ್ತರಾಗಿರುತ್ತಾರೆ ಎಂದು ಮಾನ್ಯ ಉಪಲೋಕಾಯುಕ್ತ ವರದಿಯಲ್ಲಿ ತಿಳಿಸಲಾಗಿದೆ.

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ(ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರಾದ 1) ಶ್ರೀ ಎ.ಎನ್.ಲಕ್ವಾಣಿ, ಕಾರ್ಯದರ್ಶಿ(ನಿವೃತ್ತ), ಉದಮಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕಜ ನಾಗರೀಕ ಸೇವಾ ನಿಯಮ 214(2)(ಬಿ)(i) ರಡಿ ಇಲಾಖಾ ವಿಚಾರಣೆ ನಡೆಸಲು ಮತ್ತು 2) ಶ್ರೀ ವಿ.ಡಿ.ಮನವಾಚಾರಿ, ಹಿಂದಿನ ಕಾರ್ಯದರ್ಶಿ, ಉದಮಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು. 1957 ರ ನಿಯಮ 14(ಎ) ರಡಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಶ್ರೀ ವಿ.ಡಿ.ಮನವಾಚಾರಿ, ಹಿಂದಿನ ಕಾರ್ಯದರ್ಶಿ, ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಹಾಗೂ ಶ್ರೀ ಎ.ಎನ್.ಲಕ್ಷಾಣಿ, ಕಾರ್ಯದರ್ಶಿ(ನಿವೃತ್ತ), ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳುಗಳು 1957 ರ ನಿಯಮ 214(2)(ಬಿ)(i) ರಡಿ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 244 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 31.03.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎ.ಎನ್.ಲಕ್ಷಾಣಿ, ಕಾರ್ಯದರ್ಶಿ(ನಿವೃತ್ತ), ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳುಗಳು 1957 ರ ನಿಯಮ 214(2)(ಬಿ)(i) ರಡಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಮಂಜೂರಾತಿ ನೀಡಿರುವುದರಿಂದ, 1) ಶ್ರೀ ಎ.ಎನ್.ಲಕ್ಷಾಣಿ, ಕಾರ್ಯದರ್ಶಿ(ನಿವೃತ್ತ), ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು 2) ಶ್ರೀ ವಿ.ಡಿ.ಮನವಾಚಾರಿ, ಹಿಂದಿನ ಕಾರ್ಯದರ್ಶಿ, ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ–8 ಅಥವಾ ಕರ್ನಾಟಕ ನಾಗರೀಕ ಸೇವಾ ನಿಯಮಾವಳುಗಳು 1957 ರ ನಿಯಮ 214 ರಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
(ಮೇಲೆ ಓದಲಾದ ಪತ್ರದಲ್ಲಿ ಸಲ್ಲಿಸಲಾದ ಮೂಲ ದಾಖಲಾತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
5) ಕಾರ್ಯನಿರ್ವಾಹಕ ಅಧಿಕಾರಿ, ರಾಮದುರ್ಗ ತಾಲ್ಲೂಕು ಪಂಚಾಯತಿ, ರಾಮದುರ್ಗ, ಬೆಳಗಾವಿ ಜಿಲ್ಲೆ.
6) 1) ಶ್ರೀ ಎ.ಎನ್.ಲಕ್ಷಾಣಿ, ಕಾರ್ಯದರ್ಶಿ(ನಿವೃತ್ತ), ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು 2) ಶ್ರೀ ವಿ.ಡಿ.ಮನವಾಚಾರಿ, ಹಿಂದಿನ ಕಾರ್ಯದರ್ಶಿ, ಉದಪುಡಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳಿಗೆ (ಕಾರ್ಯನಿರ್ವಾಹಕ ಅಧಿಕಾರಿ, ರಾಮದುರ್ಗ ತಾಲ್ಲೂಕು ಪಂಚಾಯತಿ, ರಾಮದುರ್ಗ, ಬೆಳಗಾವಿ ಜಿಲ್ಲೆ ಇವರ ಮುಖಾಂತರ)
7) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.